ಪಿ ಡಬ್ಲ್ಯೂ ಃ **1 -**

ಸಾಕ್ಷಿಗೆ ದಿನಾಂಕಃ **02.02.2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿಗಳ ಪರ : ಶ್ರೀ ಹೆಚ್.ಇ.ಆರ್. ವಕೀಲರ ಮೂಲಕ ಃ

ನನಗೆ ಕನ್ನಡ ಓದಲು ಬರುತ್ತಿದ್ದು, ಬರೆಯಲು ಬರುವುದಿಲ್ಲ. ನಾನು ಪ್ರತಿವಾದಿಗಳಿಗೆ ನೀಡಿದ ನೋಟೀಸ್‌ಗೆ ಅವರು ಪ್ರತ್ಯುತ್ತರ ನೀಡಿರುತ್ತಾರೆ ಎಂದರೆ ಸರಿ. ಸದರಿ ಪ್ರತ್ಯುತ್ತರದಲ್ಲಿ ಏನು ಇದೆ ಎಂದು ನಾನು ಓದಿ ತಿಳಿದುಕೊಂಡಿರುತ್ತೇನೆ. ಪ್ರತಿವಾದಿಗಳು ಸಲ್ಲಿಸಿರುವ ಪ್ರತಿವಾದ ಪತ್ರದ ವಿಚಾರಗಳನ್ನು ನಾನು ಓದಿಸಿ ತಿಳಿದುಕೊಂಡಿರುತ್ತೇನೆ. ನಾನು ಪ್ರತಿವಾದಿಗಳಿಗೆ ತಿಳುವಳಿಕೆ ನೋಟೀಸ್ ನೀಡಿದ ನಂತರ ಅವರು ನನ್ನ ವಿರುದ್ಧ ಪೊಲೀಸರಿಗೆ ದೂರನ್ನು ನೀಡಿರುತ್ತಾರೆ ಎಂದರೆ ಸುಳ್ಳು ದೂರನ್ನು ನೀಡಿರುತ್ತಾರೆ. ನಿಪಿ **5** ರ ಸಾಕ್ಷಿದಾರರಾದ ಜಯರಾಜು, ಆದಿಲ್ ಪಾಷ, ಪತ್ರ ಬರಹಗಾರರಾದ ಎಂ.ಕೆ. ಶೇಖರ್ ಮತ್ತು ನನ್ನ ವಿರುದ್ಧ ಸಿಸಿ **46/2020** ರಂತೆ ಪ್ರಕರಣ ದಾಖಲಾಗಿದೆ ಎಂದರೆ ಸರಿ. ಅದು ಸುಳ್ಳಾಗಿರುತ್ತದೆ. ಸದರಿ ದಾಖಲೆಯನ್ನು ಕ್ರಿಮಿನಲ್ ಪ್ರಕರಣದಲ್ಲಿ ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಟ್ಟಿದ್ದರು ಎಂದರೆ ಸರಿ. ಸದರಿ ರಾಸಾಯನಿಕ ಪರೀಕ್ಷೆಯಲ್ಲಿ ನಿಪಿ **5** ರಲ್ಲಿ ಇರುವ ಸಹಿಗಳು ಪ್ರತಿವಾದಿಗಳದ್ದು ಅಲ್ಲವೆಂದು ವರದಿ ನೀಡಿರುತ್ತಾರೆ ಎಂದರೆ ಸರಿ, ಅದು ನನಗೆ ಅನುಮಾನ ಇರುತ್ತದೆ. ಸದರಿ ವರದಿಯನ್ನು ನಾನು ಪ್ರಶ್ನೆ ಮಾಡಿರುವುದಿಲ್ಲ, ಈಗ ಮಾಡಿಸಬೇಕಾಗಿರುತ್ತದೆ. ಕ್ರಿಮಿನಲ್ ಪ್ರಕರಣದಲ್ಲಿ ಸದರಿ ವರದಿ ಬಂದು ಎಷ್ಟು ವರ್ಷಗಳು ಆಗಿದೆ ಎಂದು ನನಗೆ ಗೊತ್ತಿರುವುದಿಲ್ಲ.

**2.** ಈ ದಾವೆಯ ವ್ಯವಹರಣೆಯ ಬಗ್ಗೆ ನಾನು ನನ್ನ ವಕೀಲರನ್ನು ಕೇಳಿ ತಿಳಿದುಕೊಂಡಿರುತ್ತೇನೆ. **1** ನೇ ಪ್ರತಿವಾದಿಯು ರಾಸಾಯನಿಕ ಪರೀಕ್ಷಾ ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ದಿ: **05.06.2023** ರಂದು **1** ನೇ ಪ್ರತಿವಾದಿಯು ಸದರಿ ರಾಸಾಯನಿಕ ಪರೀಕ್ಷಾ ವರದಿಯನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತುಗಳು ಮನೆ ಮತ್ತು ಖಾಲಿ ನಿವೇಶನ ಎಂದರೆ ಸರಿ. ಸದರಿ ಸ್ವತ್ತುಗಳಿಗೆ ಸಂಬಂಧಿಸಿಂತೆ ನೊಂದಣೆ ಮಾಡಿಸಲು ನಕ್ಷೆಯ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಮನೆ ಮತ್ತು ಖಾಲಿ ನಿವೇಶನವನ್ನು ನೊಂದಣಿ ಮಾಡಲು ನಕ್ಷೆ ಅವಶ್ಯಕತೆ ಇಲ್ಲ ಎಂದರೆ ಅದರ ಅಗತ್ಯತೆ ಇರುತ್ತದೆ. ಜಮೀನನ್ನು ಮಾರಾಟ ಮಾಡುವಾಗ ನಕ್ಷೆಯ ಅವಶ್ಯಕತೆ ಇರುತ್ತದೆ ಎಂದರೆ ಸರಿ. ದಾವಾ ಸ್ವತ್ತುಗಳು ಮಳವಳ್ಳಿ ಟೌನ್ ನ ಒಳಗಡೆ ಇರುತ್ತದೆ ಎಂದರೆ ಸರಿ. ಸದರಿ ದಾವಾ ಸ್ವತ್ತುಗಳು ಸುಮಾರು **1** ಕೋಟಿ ರೂಪಾಯಿ ಬೆಲೆಬಾಳುತ್ತವೆ ಎಂದರೆ ಸರಿಯಲ್ಲ.

**3.** ಇ-ಛಾಪಾ ಕಾಗದವನ್ನು ಪಡೆಯಬೇಕಾದರೆ ಒಂದು ಅರ್ಜಿಯನ್ನು ಭರ್ತಿ ಮಾಡಿಕೊಡಬೇಕು ಎಂದರೆ ಸರಿ. ಯಾರು ಛಾಪಾ ಕಾಗದವನ್ನು ಪಡೆಯುತ್ತಾರೋ ಅವರೇ ಸದರಿ ಅರ್ಜಿಗೆ ಸಹಿ ಮಾಡಬೇಕು ಎಂಥರೆ ಸರಿ. ಸದರಿ ಅರ್ಜಿಯ ಪ್ರತಿಯನ್ನು ಪಡೆದು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನಾನು **1** ನೇ ಪ್ರತಿವಾದಿಯ ಸಹಿಯನ್ನು ಸೃಷ್ಟಿ ಮಾಡಿ ನಿಪಿ **5** ಚಾಪಾ ಕಾಗದವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ವಿರುದ್ದ ದಾಖಲಾಗಿದ್ದ ಪ್ರಕರಣವು ತೀರ್ಮಾನವಾಗಿಲ್ಲ ಎಂದರೆ ಸರಿ. ಅದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆಯಾಗಿರುತ್ತದೆ. ಆಧಾರ್ ಕಾರ್ಡ್ ಮತ್ತು ಮತದಾರರ ಗುರುತಿನ ಚೀಟಿಯನ್ನು ನೋಡಿ, ನಿಪಿ **5** ನ್ನು ತಯಾರು ಮಾಡಿರುತ್ತಾರೆ. ನಿಪಿ **5** ನ್ನು ಸೃಷ್ಟಿ ಮಾಡಿರುವ ಕಾರಣ ದಾವಾ ಸ್ವತ್ತಿನ ದಾಖಲೆಗಳನ್ನು ನಿಪಿ **5** ನ್ನು ತಯಾರು ಮಾಡಿರುವ ಕಾಲಕ್ಕೆ ನೋಡಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ನನಗೆ ಸದರಿ ದಾಖಲೆಗಳ ಬಗ್ಗೆ ಹೇಳಲು ಆಗುವುದಿಲ್ಲ ಎಂದರೆ ನಂಬಿಕೆಯ ಮೇಲೆ ಮಾಡಿಸಿದ್ದು, ಈಗ ಸದರಿ ದಾಖಲೆಗಳ ಬಗ್ಗೆ ಹೇಳಲು ಆಗುವುದಿಲ್ಲ. ನಿಪಿ **5** ಆಗಿರುತ್ತದೆ ಎಂದು ಹೇಳುವ ಕಾಲಕ್ಕೆ ದಾವಾ ಸ್ವತ್ತುಗಳ ಖಾತೆಯು **1** ನೇ ಪ್ರತಿವಾದಿಯ ಹೆಸರಿನಲ್ಲಿ ಇರಲಿಲ್ಲ ಎಂದರೆ ಅವರ ಹೆಸರಿಗೆ ನೊಂದಣಿಯಾಗಿತ್ತು, ಖಾತೆ ಇರಲಿಲ್ಲ. **1** ನೇ ಪ್ರತಿವಾದಿಯ ಹೆಸರಿಗೆ ಖಾತೆ ಇಲ್ಲದೇ ಇದ್ದರೂ ಸಹ ನಿಪಿ **5** ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**4.** ದಾವಾ ಸ್ವತ್ತುಗಳನ್ನು ಮಾರಾಟ ಮಾಡುತ್ತಿದ್ದಾರೆ ಎಂಬ ವಿಚಾರವನ್ನು ನನ್ನ ಸ್ನೇಹಿತ **2** ನೇ ಪ್ರತಿವಾದಿ ನನಗೆ ಹೇಳಿರುತ್ತಾರೆ. ನಿಪಿ **5** ರಲ್ಲಿ ಇರುವ ಸಹಿ **2** ನೇ ಪ್ರತಿವಾದಿಯದು ಅಲ್ಲ ಎಂದು ರಾಸಾಯನಿಕ ಪರೀಕ್ಷಾ ವರದಿಯಲ್ಲಿ ಇರುತ್ತದೆ ಎಂದರೆ ಸದರಿ ವರದಿಯ ಮೇಲೆ ಅನುಮಾನ ಇರುತ್ತದೆ. ಮಾರಾಟದ ಮಾತುಕತೆಯು **2** ನೇ ಪ್ರತಿವಾದಿಯ ಅಂಗಡಿಯ ಬಳಿ ಆಗಿರುತ್ತದೆ. ಸದರಿ ಮಾತುಕತೆ ಕಾಲಕ್ಕೆ ದಾವಾ ಸ್ವತ್ತುಗಳ ಖಾತೆಯು **2** ನೇ ಪ್ರತಿವಾದಿಯ ಹೆಸರಿನಲ್ಲಿ ಇರಲಿಲ್ಲ. ಮಧ್ಯಾಹ್ನ **1-45** ರಿಂದ **10** ನಿಮಿಷಗಳ ಕಾಲ ಮಾತ್ರ ಕ್ರಯದ ಮಾತುಕತೆ ಆಗಿರುತ್ತದೆ. ಪ್ರತಿವಾದಿಗಳು **45** ಲಕ್ಷ ರೂಪಾಯಿ ಎಂದು ಹೇಳಿದ್ದು, **34** ಲಕ್ಷ ರೂಪಾಯಿಗಳಿಗೆ ವ್ಯಾಪಾರ ಆಗಿರುತ್ತದೆ. ನಾನು ಮತ್ತು **2** ನೇ ಪ್ರತಿವಾದಿ ಮಾತ್ರ ಮಾತುಕತೆ ಮಾಡಿಕೊಂಡಿರುತ್ತೇವೆ. ನನ್ನ ವಿರುದ್ದ ಬೆಂಗಳೂರಿನಲ್ಲಿ ದಾಖಲೆಗಳನ್ನು ಸೃಷ್ಟಿ ಮಾಡುವ ಸಂಬಂಧವಾಗಿ ಕ್ರಿಮಿನಲ್ ಪ್ರಕರಣಗಳು ಇರುತ್ತವೆ ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**5.** ನನ್ನ ತಂದೆಗೆ ಸೇರಿದ ಕೋಳಿ ಫಾರಂ ನ್ನು ನಾನು **70** ಲಕ್ಷ ರೂಪಾಯಿಗಳಿಗೆ ಮಾರಾಟ ಮಾಡಿದ್ದು, ಸದರಿ ಮೊತ್ತದಲ್ಲಿ ಪ್ರತಿವಾದಿಗಳಿಗೆ ಹಣವನ್ನು ಕೊಟ್ಟಿರುತ್ತೇನೆ.ದಿ: **30.10.2018** ರಲ್ಲಿ ಸದರಿ ಕೋಳಿ ಫಾರಂ ನ ಮಾತುಕತೆಯಾಗಿರುತ್ತದೆ. **2016** ರಲ್ಲಿ ಕೋಳಿ ಫಾರಂ ಲಲಿತ್ ಎಂಬುವವರಿಗೆ ಮಾರಾಟ ಆಗಿರುತ್ತದೆ. ಆ ಸಂಬಂಧವಾಗಿ ದಾಖಲೆ ಇದ್ದು, ಅದನ್ನು ಹಾಜರುಪಡಿಸಲು

ನನಗೆ ತೊಂದರೆ ಇರುವುದಿಲ್ಲ. ಸದರಿಯವರು ಅರ್ಧ ಭಾಗದ ಮೊತ್ತವನ್ನು ನಗದು ರೂಪದಲ್ಲಿ ಮತ್ತು ಉಳಿದ ಅರ್ಧ ಭಾಗದ ಮೊತ್ತವನ್ನು ಬ್ಯಾಂಕ್ ಖಾತೆಯ ರೂಪದಲ್ಲಿ ನೀಡಿದ್ದರು. ಸದರಿ ಮೊತ್ತವು ನನ್ನ ತಾಯಿಯ ಬ್ಯಾಂಕ್ ಖಾತೆಗೆ ಜಮಾ ಆಗಿತ್ತು. ಆ ಸಂಬಂಧವಾಗಿ ದಾಖಲೆಯನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನಾನು ದಾಖಲೆಗಳನ್ನು ಸೃಷ್ಟಿ ಮಾಡುವ ಪ್ರವೃತ್ತಿಯನ್ನು ಹೊಂದಿದ್ದು, ನನಗೆ ಅಷ್ಟೊಂದು ಮೊತ್ತವನ್ನು ಪಾವತಿ ಮಾಡುವ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ.

**6.** ನಿಪಿ **5** ನ್ನು ಉಪನೊಂದಣಾಧಿಕಾರಿಗಳ ಕಛೇರಿಯ ಮುಂಭಾಗದಲ್ಲಿ ತಯಾರು ಮಾಡಲಾಗಿರುತ್ತದೆ. ನಾನು **1-45** ಗಂಟೆಗೆ **2** ನೇ ಪ್ರತಿವಾದಿಗೆ ನಿಪಿ **5** ದಾಖಲೆಯನ್ನು ಅವರ ಅಂಗಡಿಯ ಬಳಿ ಕೊಟ್ಟಿರುತ್ತೇನೆ. ನಂತರ **3-30** ಕ್ಕೆ **2** ನೇ ಪ್ರತಿವಾದಿಯು ಅವರ ಅಂಗಡಿಯ ಬಳಿ ಸದರಿ ದಾಖಲೆಯನ್ನು ಸಹಿ ಮಾಡಲು ನನಗೆ ಕೊಟ್ಟಿರುತ್ತಾರೆ. ಸದರಿ ಕಾಲಕ್ಕೆ ಸಾಕ್ಷಿದಾರರಾಗಿ ಯಾರು ಸಹಿ ಮಾಡಿದ್ದರು ಎಂದು ತಿಳಿದುಕೊಂಡಿದ್ದೆ. ಸದರಿ ಸಾಕ್ಷಿದಾರರು ನಿಪಿ **5** ಕ್ಕೆ ಯಾವ ಸ್ಥಳದಲ್ಲಿ ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಅವರು ಯಾವ ಸಮಯದಲ್ಲಿ ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಸಾಕ್ಷಿದಾರರು ಕೀರ್ತಿ ನಗರ ಮತ್ತು ಮುಸ್ಲೀಂ ಬ್ಲಾಕ್ ನವರಾಗಿರುತ್ತಾರೆ. ಸದರಿಯವರು ಸಹಿ ಮಾಡುವ ಕಾಲಕ್ಕೆ **2** ನೇ ಪ್ರತಿವಾದಿಯ ಜೊತೆಗೆ ಇದ್ದರು ಎಂದು ನಾನು ತಿಳಿದುಕೊಂಡಿರುತ್ತೇನೆ. ಸದರಿ ವಿಚಾರವನ್ನು **2** ನೇ ಪ್ರತಿವಾದಿಯು ನನಗೆ ಹೇಳಿರುತ್ತಾರೆ. ನನ್ನ ಬಳಿ ಉಳಿಕೆ ಕ್ರಯದ ಮೊತ್ತ ಇತ್ತು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.

**7.** ನಾನು **14** ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತೇನೆ ಎಂದು ಹೇಳುವ ಕಾಲಕ್ಕೆ ನಾನು ಮತ್ತು **2** ನೇ ಪ್ರತಿವಾದಿ ಮಾತ್ರ ಇದ್ದೆವು. ಸದರಿ ಮೊತ್ತವನ್ನು **2** ನೇ ಪ್ರತಿವಾದಿಯ ಅಂಗಡಿಯಲ್ಲಿ ಕೊಡಲಾಗಿರುತ್ತದೆ. ಆ ರೀತಿ ಕೊಟ್ಟಾಗ **3-30** ರಿಂದ **4-00** ಗಂಟೆಯಾಗಿತ್ತು. **2** ನೇ ಪ್ರತಿವಾದಿಯ ಅಂಗಡಿಯು ಹಳೇಯ ಅಂಚೆಕಛೇರಿಯ ಪಕ್ಕದಲ್ಲಿ ಇರುತ್ತದೆ. ಸದರಿಯವರ ಅಂಗಡಿಯಲ್ಲಿ **03** ಜನ ಕಾರ್ಮಿಕರು ಇರುತ್ತಾರೆ ಎಂದರೆ ಸರಿ. ಸದರಿಯವರು ಯಾವಾಗಲೂ ಅಂಗಡಿಯಲ್ಲೇ ಇದ್ದು, ಅವರಿಗೆ ಊಟದ ವ್ಯವಸ್ಥೆಯನ್ನು ಅಲ್ಲೇ ಮಾಡಿರುತ್ತಾರೆ ಎಂದರೆ ಸರಿಯಲ್ಲ. ರಜೆಯ ದಿನಗಳನ್ನು ಹೊರತುಪಡಿಸಿ, ಸದರಿ ಕಾರ್ಮಿಕರು ಅಂಗಡಿಯಲ್ಲಿಯೇ ಇರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಪ್ರತಿವಾದಿಗಳಿಗೆ **14** ಲಕ್ಷ ರೂಪಾಯಿಗಳನ್ನು ಕೊಟ್ಟಿಲ್ಲ, ಆ ರೀತಿ ಮೊತ್ತವನ್ನು ಕೊಡಲು ನಾನು ಸಾಮರ್ಥ್ಯ ಹೊಂದಿಲ್ಲ ಮತ್ತು ನನ್ನ ಮತ್ತು ಪ್ರತಿವಾದಿಗಳ ನಡುವೆ ಯಾವುದೇ ಕ್ರಯದ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ನಿಪಿ **5** ಕ್ಕೆ ಪ್ರತಿವಾದಿಗಳು ಯಾವತ್ತೂ ಸಹಿ ಮಾಡಿಕೊಟ್ಟಿಲ್ಲ, ನನ್ನ ಮುಂದೆ ಕೂಡ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ನನ್ನ ಮುಂದೆ ಸಹಿ ಮಾಡದೇ ಇದ್ದರೂ ಸಹ ನಿಪಿ **5** ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ **5** ನ್ನು ನನ್ನ ಸಮಕ್ಷಮ ಯಾವತ್ತೂ ತಯಾರು ಮಾಡಿಲ್ಲ ಎಂದರೆ ಸರಿಯಲ್ಲ. ಪತ್ರಬರಹಗಾರರಾದ

ಎಂ.ಕೆ. ಶೇಖರ್‌ರವರು ನನ್ನ ಸಮಕ್ಷಮ ನಿಪಿ **5** ಕ್ಕೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ **5** ಕ್ಕೆ ಪ್ರತಿವಾದಿಗಳ ಸಹಿಯನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ಕಾರಣದಿಂದ ರಾಸಾಯನಿಕ ಪರೀಕ್ಷಾ ವರದಿಯನ್ನು ನೀಡಿರುತ್ತಾರೆ ಎಂದರೆ ಅದು ಸುಳ್ಳಾಗಿರುತ್ತದೆ. ಸದರಿ ದಾಖಲೆಯನ್ನು ನಾನು ನೋಡಿರುವುದಿಲ್ಲ. ಸಾದ್ಯವಾದರೆ ಹೆಚ್ಚು ಬೆಲೆ ಬಾಳುವ ದಾವಾ ಸ್ವತ್ತುಗಳನ್ನು ಲಪಟಾಯಿಸಲು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಮಳವಳ್ಳಿ.